# ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯ

ಜ್ಞಾನ ಸಾಗರ ಆವರಣ, ವಿನಾಯಕ ನಗರ, ಕಂಟೋನ್ಮೆಂಟ್, ಬಳ್ಳಾರಿ-583 105

**ಕುಲಸಚಿವರು** **ದೂರವಾಣಿ: 08392-242873/ಫ್ಯಾಕ್ಸ್: 08392- 242097**


ಸಂಖ್ಯೆ: ವಿಶ್ರೀಕೃವಿಬ/ಆಡಳಿತ/2017-18/329 ದಿನಾಂಕ: 18.07.2017

**: ಸುತ್ತೋಲೆ :**

ಈ ಮೂಲಕ ಎಲ್ಲಾ ಸಂಯೋಜಿತ ಸ್ನಾತಕ ಮಹಾವಿದ್ಯಾಲಯಗಳ ಪ್ರಾಂಶುಪಾಲರುಗಳಿಗೆ ತಿಳಿಯಪಡಿಸುವುದೇನೆಂದರೆ, ತಮ್ಮ ತಮ್ಮ ಮಹಾವಿದ್ಯಾಲಯಗಳಲ್ಲಿ 2015-16 ಹಾಗೂ 2016-17ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶ ಪಡೆದು ಕಳೆದ ಏಪ್ರೀಲ್/ಮೇ 2017ರಲ್ಲಿ ದ್ವಿತೀಯ ಹಾಗೂ ಚತುರ್ಥ ಸೆಮಿಸ್ಟರ್ ಪರೀಕ್ಷೆಗೆ ಹಾಜರಾದ ಅನ್ಯ ರಾಜ್ಯ ಪರೀಕ್ಷಾ ಮಂಡಳಿ ಹಾಗೂ ಅನ್ಯ ಪರೀಕ್ಷಾ ಮಂಡಳಿ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಈ ಕೆಳಕಂಡ ಮಾಹಿತಿಗಳನ್ನು ಸಂಗ್ರಹಿಸಿ ಒಂದು ವಾರದೊಳಗೆ ವಿಶ್ವವಿದ್ಯಾಲಯಕ್ಕೆ ಕಳುಹಿಸಿಕೊಡುವಂತೆ ಸೂಚಿಸಿದೆ.

1. ವಿದ್ಯಾರ್ಥಿಗಳು 10+2 ವ್ಯಾಸಂಗ ಮಾಡಿದ ಪದವಿ ಪೂರ್ವ ಮಹಾವಿದ್ಯಾಲಯ ಮಂಡಳಿಗಳ ವಿಳಾಸ
2. ವಿದ್ಯಾರ್ಥಿಗಳು 10+2 ವ್ಯಾಸಂಗ ಮಾಡಿದ ಮಹಾವಿದ್ಯಾಲಯದಿಂದ ನೀಡಿದ ವರ್ಗಾವಣೆ ಪತ್ರ(T.C)
3. ವಿದ್ಯಾರ್ಥಿಗಳು ನಿಯಮಿತ ವಿದ್ಯಾರ್ಥಿಗಳಾ ಅಥವಾ ದೂರ ಶಿಕ್ಷಣ ವಿದ್ಯಾರ್ಥಿಗಳಾ ಎಂಬ ಬಗ್ಗೆ ವಿವರಣೆ.
4. ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯದ ಬ್ರಿಡ್ಜ್ ಕೋರ್ಸ್ ಬಗ್ಗೆ ಮಾನ್ಯತೆ.
5. ನ್ಯಾಯಲಯದಲ್ಲಿ ದಾವೆ ಹೂಡಿದ ವಿದ್ಯಾರ್ಥಿಗಳ ವಿವರ ಹಾಗೂ ರಿಟ್‌ಪಿಟಿಷನ್ ಸಂಖ್ಯೆಗಳು
6. ವಿದ್ಯಾರ್ಥಿಗಳು ವ್ಯಾಸಂಗ ಮಾಡಿದ ಪರೀಕ್ಷಾ ಮಂಡಳಿಗಳಿಗೆ ಯು.ಜಿ.ಸಿ, ಕನಾಟಕ ಸರ್ಕಾರ ಹಾಗೂ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಇವುಗಳ ಮಾನ್ಯತೆ.

ಇದಕ್ಕೆ ಸಂಬಂಧಿಸಿದಂತೆ ಆಯಾ ಮಹಾವಿದ್ಯಾಲಗಳ ಪ್ರಾಚಾರ್ಯರು ವಿದ್ಯಾರ್ಥಿಗಳಿಂದ ಪೂರ್ಣ ಪ್ರಮಾಣದ ಮಾಹಿತಿ ಪಡೆದುಕೊಂಡು 07 ದಿನಗಳ ಒಳಗಾಗಿ ಮಾಹಿತಿಯನ್ನು ಸಲ್ಲಿಸುವುದು. ಒಂದು ವೇಳೆ ಮಾಹಿತಿಯನ್ನು ಸಲ್ಲಿಸದಿದ್ದರೆ. ಪ್ರವೇಶಾತಿ ಹಾಗೂ ಫಲಿತಾಂಶ ತಡೆಹಿಡಿಯಲಾಗುವುದು. ಮಾಹಿತಿ ಸಲ್ಲಿಸಿದ ನಂತರ ದಿನಾಂಕ : 29.07.2017 ರಂದು ವಿವಿಧ ನಿಕಾಯಗಳ ಡೀನರ ಸಭೆಯನ್ನು ಕರೆದು ಚರ್ಚಿಸಿ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು.

ಕುಲಸಚಿವರು
ವಿಜಯನಗರ ಶ್ರೀಕೃಷ್ಣದೇವರಾಯ ವಿಶ್ವವಿದ್ಯಾಲಯ
ಬಳ್ಳಾರಿ.

ಗೆ,
ಎಲ್ಲಾ ಸಂಯೋಜಿತ ಮಹಾವಿದ್ಯಾಲಯಗಳ ಪ್ರಾಚಾರ್ಯರುಗಳು,
ವಿಶ್ರೀಕೃವಿವಿ, ಬಳ್ಳಾರಿ.

**ಪ್ರತಿಗಳನ್ನು :**

1. ಮಾನ್ಯಕುಲಪತಿಗಳ ಆಪ್ತ-ಕಾರ್ಯದರ್ಶಿ, ವಿಶ್ರೀಕೃವಿವಿ, ಬಳ್ಳಾರಿ.
2. ಕಛೇರಿ ಪ್ರತಿ.